> ಸ್ನಾನ ಮಾಡಿ ಎರಡು ದಿನ ಬೇರೆ ಆಗಿತ್ತು. ಎಲ್ಲೂ ಮಾಸ್ಕ್ ಸಿಗದ ಕಾರಣ ಇದ್ದ ಮಾಸ್ಕನ್ನೇ ತೊಳೆದು ಕಟ್ಟಿಕೊಂಡಿದ್ದ. ಎರಡು ದಿನದ ದೂಳು ಮತ್ತು ಇವನ ಸೀನುಗಳನ್ನು ಮೆತ್ತಿಕೊಂಡಿದ್ದ ಅದು ಗಬ್ಬುನಾತ ಹೊಡೆಯುತ್ತಿತ್ತು.

ಅವಕಾಶವಿತ್ತು. ವರ್ಷದ ಟ್ರೇನಿಂಗ್ ಮುಗಿಸಿದಾಗ ಬೈಗುಳಗಳ ಟ್ರೇನಿಂಗ್ ಅವನ ಕಿವಿಗೆ ಆಗಿದ್ದ ಕಾರಣ ಸ್ಟೇಷನ್‌ಗಳಲ್ಲಿ ಬಳಕೆಯಾಗುತ್ತಿದ್ದ ಬೈಗುಳಗಳು ಕಿರಿಕಿರಿ ಮಾಡುತ್ತಿರಲಿಲ್ಲ. ಆದರೂ ಹಿರಿಯ ಅಧಿಕಾರಿಗಳ ಕುರಿತು ಕಿರಿಯ ಅಧಿಕಾರಿಗಳು ಬಳಸುತ್ತಿದ್ದ ಬೈಗುಳಗಳು ಆಶ್ಚರ್ಯವನ್ನು ಉಂಟುಮಾಡಿದ್ದವು. ಅವರ ಅನುಪಸ್ಥಿತಿಯಲ್ಲೇ ಏನೆಲ್ಲಾ ಬೈಯುತ್ತಿದ್ದ ಕಿರಿಯ ಅಧಿಕಾರಿಗಳು, ಹಿರಿಯ ಅಧಿಕಾರಿಗಳ ಮುಂದೆ ನಿಂತಾಗ ಸೆಲ್ಯೂಟ್ ಹೊಡೆಯುವುದನ್ನು ನೋಡುವುದೇ ಒಂದು ಸೋಜಿಗವಾಗಿತ್ತು. ಅವನಂತೂ ಇದುವರೆಗೂ ಯಾರಿಗೂ ಹಾಗೆ ಬೈದದ್ದು ಇರಲಿಲ್ಲ.

ಈ ಸ್ಟೇಷನ್‌ನಿಗೆ ನಾಲ್ಕು ವಾರವೂ ಕಳೆದಿರಲಿಲ್ಲ. ಕೋವಿಡ್–19 ವೈರಸ್ ಕಾರಣಕ್ಕೆ ಕರ್ನಾಟಕ ಲಾಕ್‌ಡೌನ್ ಮಾಡಿದ್ದರಿಂದ, ವಿಶೇಷ ಡ್ಯೂಟಿ ಅಂತ ಮೈಸೂರು ಸಿಟಿಗೆ ಅವನನ್ನು ಹಾಕಿದ್ದರು. ಹಾಕಿದ್ದರು ಅನ್ನುವುದಕ್ಕಿಂತ ರಾಜಪ್ಪ ಹಾಕಿಸಿಕೊಂಡಿದ್ದರು ಅನ್ನೋದು ಸರಿ. ಎಸ್‌ಪಿ ಅವರ ಮೆಸೇಜ್‌ಗಳು ಮೊದಲಿಗಿಂತಲೂ ಹೆಚ್ಚಾಗಿರುತ್ತಿದ್ದವು. ಅವುಗಳಿಗೆ ಉತ್ತರಿಸಲು ಮಾದೇಶ ಅನಿವಾರ್ಯವಾಗಿದ್ದ.

ಡ್ಯೂಟಿ ನಡುವೆ ಬಿಡುವು ದೊರೆತಾಗ, ಯಾವುದಾದರೂ ಪುಸ್ತಕ ಹಿಡಿದು ಕಾಲಕಳೆಯುತ್ತಿದ್ದ ಮಾದೇಶನಿಗೆ ಲಾಕ್‌ಡೌನ್ ಡ್ಯೂಟಿಯಿಂದ ಕಿರಿಕಿರಿ ಜಾಸ್ತಿಯಾಗಿತ್ತು. ಪೊಲೀಸರು ಮಾಸ್ಕ್ ಕಟ್ಟಿಕೊಂಡೇ ಇರಬೇಕು ಎಂಬ ಆದೇಶವಿತ್ತು. ಹತ್ತು ರೂಪಾಯಿಗೆ ಸಿಗುತ್ತಿದ್ದ ಮಾಸ್ಕ್ ಈಗ ಐವತ್ತು ರೂಪಾಯಿಯಾಗಿತ್ತು. ದಿನಕ್ಕೆ ಎರಡು ಬಾರಿ ಮಾಸ್ಕ್ ಬದಲಾಯಿಸಿ ಎಂದೇನೋ ಹೇಳಿದ್ದರು. ಆದರೆ ಡಿಪಾರ್ಟ್‌ಮೆಂಟ್‌ನಿಂದ ಸಪ್ಲೈ ಇಲ್ಲ. ನೀವೇ ತಗೋಬೇಕು ಅಂದಾಗ, ಮಾದೇಶನಿಗೆ ಉರಿದು ಹೋಗಿತ್ತು. ದಿನಕ್ಕೆ ನೂರು ರೂಪಾಯಿ ಮಾಸ್ಕ್‌ಗೆ ಖರ್ಚು ಮಾಡಿದ ಮೇಲೆ, ನನಗೇನು ಉಳಿಯುತ್ತೆ "ಶಾ..." ಅಂದುಕೊಂಡ. ಶಾ ಪದ ತನ್ನ ಬಾಯಿಂದ ಹೊರಬಂದಿದ್ದು ಅವನಿಗೇ ಅಚ್ಚರಿಯಾಗಿತ್ತು. ಬರೋ ಇಪ್ಪತ್ತು ಸಾವಿರದಲ್ಲಿ ತನ್ನ ಖರ್ಚು, ಬೈಕ್ ಪೆಟ್ರೋಲ್ ಖರ್ಚು ನಿಭಾಯಿಸೋದು, ಜೊತೆಗೆ ಊರಿಗೆ ದುಡ್ಡು ಕಳಿಸೋದು ಇಷ್ಟಕ್ಕೆ ಸರಿಯಾಗುತ್ತಿತ್ತು. ಮದುವೆಯಾಗು ಅಂತ ಅಮ್ಮ ಹೇಳುತ್ತಿದ್ದರೂ, ಕೇಳಿಸದವನ ಹಾಗೆ ಸುಮ್ಮನಿರುತ್ತಿದ್ದ.

ಕೋವಿಡ್–19 ಲಾಕ್‌ಡೌನ್ ಶುರುವಾದ ಮೇಲೆ ಮಾದೇಶನಿಗೆ ಒತ್ತಡ ಹೆಚ್ಚಾಯಿತು. ಆ ಪಕ್ಕ್ಡ ರಾಜಪ್ಪರ ಕಿರಿಕಿರಿ ಜೊತೆಗೆ ದಿನದ 24 ಗಂಟೆ ಡ್ಯೂಟಿ ಬೇರೆ. ಇದು ಸಾಲದು ಎಂಬಂತೆ ಪಕ್ಕ್ಡ ರಾಜಪ್ಪರ ಆಸ್‌ಹೋಳ್ ಮನೆಯವರ ಕಾಟ ಬೇರೆ. ರಾಜಪ್ಪರ ಹೆಂಡತಿಯಂತು, "ಮಾದೇಶ ಹಾಲು ತಾರೋ... ಅಕ್ಕಿ ತಾರೋ..." ಅನ್ನುತ್ತಿದ್ದರು. ಜೊತೆಗೆ ರಾಜಪ್ಪರ ಕ್ರೂ ದಮ್ ಮಗಳ ಕಾಟ ಬೇರೆ. ಸಾಕಾಗಿ ಹೋಗಿತ್ತು ಅವನಿಗೆ. ಈ ರಾಜಪ್ಪ ಐಡಿಯಾ ಮಾಡಿಯೇ ಮಾದೇಶನ ಡ್ಯೂಟಿಯನ್ನು ತನ್ನ ಜೊತೆಗೆ ಹಾಕಿಸಿಕೊಂಡಿದ್ದ. ಮದುವೆಯಾಗದೇ ಇರುವವ 24 ಗಂಟೆ ಡ್ಯೂಟಿಗೆ ಅರ್ಹ.

ರಾಜಪ್ಪನವರು ಮನೆ ಸೇರಿದಾಗಲೆಲ್ಲಾ, ಅವರ ಪರವಾಗಿ ಅವರ ಬೀಟ್ ಅನ್ನು ಇವನು ನೋಡಿಕೊಳ್ಳಬೇಕಾಗಿತ್ತು. ಯಾವುದೇ ಗಂಭೀರ ವಿಷಯ ಕಂಡು ಬಂದ ತಕ್ಷಣ, ರಾಜಪ್ಪರಿಗೆ ಫೋನ್